**ಓ.ಎಸ್. ನಂ. 93/2023** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 19.6.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ 1, 2, 6 ಮತ್ತು 7 ನೇ ಪ್ರತಿವಾದಿ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ

ದಾವಆಸ್ತಿಯ ಸರ್ವೆ ನಂ.8 ಆಗಿದ್ದು, ಅದರ ವಿಸ್ತೀರ್ಣ 2-38 ಎಕರೆ ಆಗಿರುತ್ತದೆ. ದಾವೆ ಸಲ್ಲಿಸುವ ಸಮಯದಲ್ಲಿ ದಾವಆಸ್ತಿಯ ಪೈಕಿ 1-06 ಎಕರೆ ಪಹಣಿಯು ನನ್ನ ಹೆಸರಿನಲ್ಲಿತ್ತು. ದಾವಆಸ್ತಿಯ ಪೂರ್ವಕ್ಕೆ ಕೆರೆ, ಪಶ್ಚಿಮ ಮತ್ತು ಉತ್ತರಕ್ಕೆ ಗ್ರಾಮಠಾಣಾ ಮತ್ತು ದಕ್ಷಿಣಕ್ಕೆ ಮುಸ್ಲಿಂರ ಸ್ಮಶಾನ ಇರುತ್ತದೆ. ದಾವಆಸ್ತಿಯಲ್ಲಿ ವ್ಯವಸಾಯ ಮಾಡುವುದಿಲ್ಲ, ಮನೆಗಳು ಇರುತ್ತವೆ. ದಾವಆಸ್ತಿಯು ಮೈಸೂರು-ಮಾನಂದವಾಡಿ ರಸ್ತೆಗೆ ತಾಗಿಗೊಂಡಿರುತ್ತದೆ. ಅದೇ ರೀತಿ ಅಂತರಸಂತೆ ಗ್ರಾಮಕ್ಕೆ ಹೊಂದಿಕೊಂಡಂತೆ ಇರುತ್ತದೆ. ದಾವಆಸ್ತಿಗೆ ಸಂಬಂಧಿಸಿದಂತೆ ಯಾವುದೇ ನೋಂದಾಯಿತ ದಾಖಲೆಯಾಗಿರುವುದಿಲ್ಲ. ನನಗೆ 7 ನೇ ಪ್ರತಿವಾದಿ ತಂದೆಯ ಪರಿಚಯವಿರುತ್ತದೆ. 7 ನೇ ಪ್ರತಿವಾದಿಯ ತಂದೆಯು 1970 ರಲ್ಲಿ ದಾವ ಸರ್ವೆ ನಂಬರ್ 8 ರ ಪೈಕಿ 13½ ಗುಂಟೆಯನ್ನು ರೆಹಮಾನ್ ಸಾಬ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ 13½ ಗುಂಟೆಯ ಪೂರ್ವಕ್ಕೆ ಕೆರೆ ಕೋಡಿ, ಪಶ್ಚಿಮಕ್ಕೆ ಅಂತರಸಂತೆ ಅಂಗಡಿ ಬೀದಿಗೆ ಸೇರಿದ ಮಳಿಗೆಗಳು, ದಕ್ಷಿಣಕ್ಕೆ ಸಾಲುಂಡಿ ಮಾಲೇಗೌಡರ ಜಾಗ, ಉತ್ತರಕ್ಕೆ ರೆಹಮಾನ್ ಸಾಬ್ ರವರ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ 13½ ಗುಂಟೆ ಆಸ್ತಿಯ 11 ಬಿ ನಕಾಶೆಯು 7 ನೇ ಪ್ರತಿವಾದಿ ಹೆಸರಿಗೆ ಆಗಿರುತ್ತದೆ ಎಂದರೆ ಸಾಕ್ಷಿದಾರರು ಈಗ ಮಾಡಿಸಿಕೊಂಡಿರುತ್ತಾರೆ ಎನ್ನುವರು. 11 ಬಿ ನಕಾಶೆ ಮಾಡಿರುವ ಬಗ್ಗೆ ಗ್ರಾಮ ಪಂಚಾಯಿತಿಗೆ ತಕರಾರು ನೀಡಿರುತ್ತೇನೆ. 11 ಬಿ ನಕಾಶೆ ಮಾಡಿರುವ ಬಗ್ಗೆ ಕಾರ್ಯನಿರ್ವಹಣಾಧಿಕಾರಿ, ಹೆಚ್.ಡಿ.ಕೋಟೆ ರವರಿಗೆ ಮೇಲ್ಮನವಿ ಸಲ್ಲಿಸಿರುವುದಿಲ್ಲ. 7 ನೇ ಪ್ರತಿವಾದಿಯು ಹಿಂದಿನಿಂದಲೂ ಸದರಿ 13½ ಗುಂಟೆ ಆಸ್ತಿಯ ಕಂದಾಯವನ್ನು ಗ್ರಾಮ ಪಂಚಾಯಿತಿಗೆ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿದಾರರು 1986-87 ರಲ್ಲಿ ತಹಶೀಲ್ದಾರ್ ರವರು ಎಂ.ಆರ್ 49/1986-87 ಮತ್ತು 50/1986-87 ರ ಖಾತೆಯನ್ನು ವಜಾ ಮಾಡಿರುತ್ತಾರೆ ಎನ್ನುವರು. ಆ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಯಾವುದೇ ಖಾತೆ ವಜಾ ಆಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಯ ತಂದೆ ಅಬ್ದುಲ್ ಸತ್ತರ್ ಖಾನ್ ರವರು ದಿನಾಂಕ 7.3.1970 ರಂದು 13½ ಗುಂಟೆ ಜಮೀನನ್ನು ರೆಹಮಾನ್ ಖಾನ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನಗೆ ಕ್ರಯಪತ್ರವಾಗಿರುವ ವಿಚಾರ 2009 ರಲ್ಲಿ ಎ.ಸಿ ನ್ಯಾಯಾಲಯದಲ್ಲಿ ಗೊತ್ತಾಗಿರುತ್ತದೆ. ಎ.ಸಿ ನ್ಯಾಯಾಲಯದಲ್ಲಿ ನನ್ನ ತಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಈ ದಾವೆಯನ್ನು ಹೊರತುಪಡಿಸಿ ಬೇರೆ ನ್ಯಾಯಾಲಯದಲ್ಲಿ ನಾನು ಸದರಿ ಕ್ರಯಪತ್ರವನ್ನು ಪ್ರಶ್ನೆ ಮಾಡಿರುವುದಿಲ್ಲ. ಸದರಿ ಅಬ್ದುಲ್ ಸತ್ತರ್ ಖಾನ್ ತೀರಿಕೊಂಡ ನಂತರ ಅವರ ಮಕ್ಕಳಾದ 2 ನೇ ಪ್ರತಿವಾದಿ ಮತ್ತು ಫೈರೋಜ್ ಖಾನ್ ವಿಭಾಗ ಮಾಡಿಕೊಂಡು ತಲಾ 6¼ ಗುಂಟೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮವಾಗಿ ಮಾಡಿಸಿಕೊಂಡಿರುತ್ತಾರೆ ಎನ್ನುವರು. ಖಾತೆ ಮಾಡಿಸಿಕೊಂಡಿರುವ ವಿಚಾರ 2009 ರಲ್ಲಿ ಗೊತ್ತಾಗಿರುತ್ತದೆ. ಖಾತೆಯನ್ನು ಪ್ರಶ್ನಿಸಿ ನನ್ನ ತಂದೆ ಮೇಲ್ಮನವಿ ಸಲ್ಲಿಸಿದ್ದು ಅದು ವಿಚಾರಣೆಗೆ ಬಾಕಿ ಇದ್ದು, ಅಲ್ಲಿ ನಾನು ಹಾಜರಾಗುತ್ತಿಲ್ಲ. 1 ನೇ ಪ್ರತಿವಾದಿಯು ದಾವ ಸರ್ವೆ ನಂಬರಿನಲ್ಲಿ 6 ಗುಂಟೆ ಆಸ್ತಿಯನ್ನು ದಿನಾಂಕ 11.11.2005 ರಂದು ಅನ್ವರ್ ಪಾಷ ಮತ್ತು ಇತರರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಅವರು ಖರೀದಿಸಿದ ನಂತರ ಅವರ ಹೆಸರಿನಲ್ಲಿ ಖಾತೆಯಾಗಿದ್ದು, ಅವರು ಸದರಿ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ಅವರು ಸ್ವಾಧೀನದಲ್ಲಿರುತ್ತಾರೆ, ಆದರೆ ನಾವು ಕ್ರಯಕ್ಕೆ ನೀಡಿರುವುದಿಲ್ಲ ಎನ್ನುವರು. 6 ನೇ ಪ್ರತಿವಾದಿಯು ದಾವ ಸರ್ವೆ ನಂಬರಿನಲ್ಲಿ 20 ಗುಂಟೆ ಆಸ್ತಿಯನ್ನು ದಿನಾಂಕ 26.6.1986 ರಂದು ಖರೀದಿ ಮಾಡಿ ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ತಹಶೀಲ್ದಾರ್ ರವರು ಖಾತೆ ವಜಾ ಮಾಡಿರುತ್ತಾರೆ ಎನ್ನುವರು. ಈಗ ಯಾರು ಸದರಿ ಆಸ್ತಿಯ ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 6 ನೇ ಪ್ರತಿವಾದಿಯು ಖರೀದಿ ಮಾಡಿದ ದಿನದಿಂದ ಮನೆ ಕಟ್ಟಿಕೊಂಡು ಸ್ವಾಧೀನದಲ್ಲಿರುತ್ತಾರೆ ಎಂದರೆ ಸಾಕ್ಷಿದಾರರು ಅಕ್ರಮವಾಗಿ ಸ್ವಾಧೀನದಲ್ಲಿರುತ್ತಾರೆ ಎನ್ನುವರು. ಸರ್ವೆ ನಂ.8 ರ ಆಸ್ತಿಯು ಮೊದಲು ರೆಹಮಾನ್ ಖಾನ್ ರವರಿಗೆ ಸೇರಿದ್ದು ಅವರು ಮೇಲೆ ಹೇಳಿದ ವ್ಯಕ್ತಿ ಹಾಗೂ ಇತರರಿಗೆ ಮಾರಾಟ ಮಾಡಿದ್ದು, ಅಲ್ಲಿ ಯಾವುದೇ ಆಸ್ತಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ. ಸೈಯದ್ ಗೌಸ್ ನನ್ನ ತಂದೆಯಾಗಿರುತ್ತಾರೆ. ನನ್ನ ತಂದೆ ದಿನಾಂಕ 10.12.2009 ರಂದು 2, 6 ಮತ್ತು 7 ನೇ ಪ್ರತಿವಾದಿಯರಿಗೆ ವಕೀಲರ ಮೂಲಕ ನೋಟಿಸ್ ನೀಡಿದ್ದರು ಎಂದರೆ ಸರಿ. ಅವರು ಸದರಿ ನೋಟಿಸಿಗೆ ಉತ್ತರ ನೀಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಎ.ಸಿ ನ್ಯಾಯಾಲಯದಲ್ಲಿ ಆರ್.ಎ 358/2010 ರಂತೆ ಮೇಲ್ಮನವಿ ಸಲ್ಲಿಸಿದ್ದು ಅದು ದಿನಾಂಕ 24.8.2016 ರಂದು ವಜಾ ಆಗಿರುತ್ತದೆ ಎಂದರೆ ಸಾಕ್ಷಿದಾರರು ನನ್ನ ತಂದೆ 2015 ರವರೆಗೆ ಎ.ಸಿ ನ್ಯಾಯಾಲಯಕ್ಕೆ ಹೋಗಿರುತ್ತಾರೆ ಎನ್ನುವರು. ದಾವಆಸ್ತಿಯು ನನ್ನ ತಂದೆಗೆ ಸೇರಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ನಾನು ಮತ್ತು ನನ್ನ ಸಹೋದರರಿಗೆ ದಾವಆಸ್ತಿಯಲ್ಲಿ ಹಕ್ಕು ಇರುವುದು ಸುಳ್ಳು ಎಂದರೆ ಸರಿಯಲ್ಲ. ದಾವಆಸ್ತಿಯ ಮೇಲೆ ನಮಗೆ ಯಾವುದೇ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳು ಮಾಲೀಕತ್ವವನ್ನು ಸಾಬೀತುಪಡಿಸುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಅಥವಾ ಅವರ ಪೂರ್ವಜರು

ದಾವಆಸ್ತಿಯ ಸ್ವಾಧೀನ ಅಥವಾ ಮಾಲೀಕತ್ವ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯಲ್ಲಿ ಮನೆಗಳನ್ನು ಕಟ್ಟಿಕೊಂಡು ಸದರಿ ಆಸ್ತಿಯು ಗ್ರಾಮ ಪಂಚಾಯಿತಿಗೆ ಸೇರಿರುವುದರಿಂದ ನಮಗೆ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿದಾರರು ಅಕ್ರಮವಾಗಿ ಮಾಡಿಕೊಂಡಿರುತ್ತಾರೆ ಎನ್ನುವರು. ಪಹಣಿಯಲ್ಲಿ ನನ್ನ ಹೆಸರು ಕೈತಪ್ಪಿನಿಂದ ಬಂದಿರುವುದರಿಂದ ಅಕ್ರಮ ಲಾಭ ಪಡೆಯಲು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಆಸ್ತಿಯು ಹಯಾತ್ ಬಿ ಇಮಾಮ್ ಸಾಬ್ ರವರ ಹೆಸರಿನಲ್ಲಿತ್ತು. ನಾವು ದಾವಆಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲ ಮತ್ತು ಮಾಲೀಕತ್ವ ಹೊಂದಿರುವುದಿಲ್ಲ ಮತ್ತು ಈ ದಾವೆ ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಆಸ್ತಿಯ ಚಕ್ಕುಬಂದಿಯನ್ನು ತೋರಿಸಲು ಸರ್ವೆ ಇಲಾಖೆಯಿಂದ ಅಳತೆ ಮಾಡಿಸಿರುತ್ತೇನೆ. ಅಳತೆ ಮಾಡಿಸಿರುವ ನಕಾಶೆಯನ್ನು ನ್ಯಾಯಾಲಯಕ್ಕೆ ನೀಡಲು ತೊಂದರೆ ಇರುವುದಿಲ್ಲ. ನಾನು ಸರ್ವೆ ಇಲಾಖೆಯಿಂದ ಅಳತೆ ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 8 ರಿಂದ 12 ನೇ ಪ್ರತಿವಾದಿ ಪರ ವಕೀಲರು ಗೈರುಹಾಜರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.